# ಕೆನರಾ ವೆಲ್‌ಫೆರ್ ಟ್ರಸ್ಟ್

सा विद्या या विमुक्तये

## ಆಡಳಿತಾಧಿಕಾರಿ ವಾರ್ಷಿಕ ವರದಿ 2014–2015







ಟ್ರಸ್ಟಿನ ಧರ್ಮದರ್ಶಿಗಳ, ಮೆನೆಜಿಂಗ್ ಕಮಿಟಿ ಸದಸ್ಯರ, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ, ಪ್ರಥಮ ಸಹಾಯಕರ ಮತ್ತು ಕಾರ್ಯಾಲಯ ಸಹಾಯಕರ

**ಸಂಯುಕ್ತ ವಾರ್ಷಿಕ ಸಭೆ**

**04 ಜುಲೈ 2015**

# ಪರಿವಿಡಿ



| ವಿಷಯ | ಪುಟ ಸಂ. |
|---|---|
| 1. ಸ್ವಾಗತ ಹಾಗೂ ಉಪೋದ್ಘಾತ | 03–05 |
| 2. ಆದರ್ಶಗಳ ಬೆಳಕಿನಲ್ಲಿ | 06 |
| 3. 19 ಜುಲೈ 2014 ರಂದು ನಡೆದ ವಾರ್ಷಿಕ ಸಭೆಯಲ್ಲಿ ಅಧ್ಯಕ್ಷರು ಉಲ್ಲೇಖಿಸಿದ ಕೆಲವು ವಿಚಾರಗಳು | 06–07 |
| 4. ಶೈಕ್ಷಣಿಕ ಹಾಗೂ ಸಾಮಾಜಿಕ ವಿಚಾರದ ಕುರಿತು ಟ್ರಸ್ಟಿನ ಧ್ಯೇಯ | 07–08 |
| 5. ಕಳೆದ ವಾರ್ಷಿಕ ಸಭೆಯಲ್ಲಿ ಸ್ವೀಕರಿಸಿದ ನಿರ್ಣಯಗಳು ಹಾಗೂ ಅವುಗಳ ಅನುಷ್ಠಾನದ ಕುರಿತು | 09–11 |
| 6. ಟ್ರಸ್ಟು / ಸಂಸ್ಥೆಗಳ ಹೆಸರಿನಲ್ಲಿರುವ ಭೂಮಿಯ ವಿವರ | 12 |
| 7. ವಿದ್ಯಾರ್ಥಿಗಳ ದಾಖಲಾತಿ ಹಾಗೂ ಸಿಬ್ಬಂದಿಗಳ ವಿವರ | 13–15 |
| 8. ಶೈಕ್ಷಣಿಕ ಪ್ರಗತಿ: 2014–2015ನೇ ಸಾಲಿನ ಶೈಕ್ಷಣಿಕ ಸಾಧನೆ | 16–20 |
| 9. 2014–2015ನೇ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ವಿಶೇಷ ಸಾಧನೆ | 20–22 |
| 10. ದಿವೇಕರ ವಾಣಿಜ್ಯ ವಿದ್ಯಾಲಯದಲ್ಲಿ ಎಂ.ಕಾಂ. ಸ್ನಾತಕೋತ್ತರ ವರ್ಗ ಆರಂಭ | 23 |
| 11. ದಿನಕರ ಕಲಾನಿಕೇತನ, ಕಾರವಾರದಲ್ಲಿ ಸಂಗೀತ ಹಾಗೂ ತಬಲಾ ತರಬೇತಿ | 23 |
| 12. ಅನುಮೋದಿತ ಹುದ್ದೆಗಳಲ್ಲಿ ನೇಮಕಾತಿ ಹೊಂದಿದ ಶಿಕ್ಷಕರ ಹಾಗೂ ಶಿಕ್ಷಕೇತರ ಸಿಬ್ಬಂದಿಗಳು | 23–24 |
| 13. ಟ್ರಸ್ಟಿನ ವಿವಿಧ ಶಾಲೆ–ಕಾಲೇಜುಗಳಲ್ಲಿ ನಡೆದ ಅಭಿವೃದ್ಧಿ ಹಾಗೂ ಇತರ ಕಾರ್ಯಗಳು | 25–27 |
| 14. ಕ್ರುಗರ ಫೌಂಡೇಶನ, ಕಾರವಾರ, ಇವರು ತಾತ್ಕಾಲಿಕ ಶಿಕ್ಷಕರಿಗೆ ನೀಡಿದ ಸಹಾಯಧನ | 27–28 |
| 15. 'ಜನರಲ್ ವೆಲ್‌ಫೆರ್ ಫಂಡ್' ನಿಂದ ನೀಡಿದ ಸಹಾಯಧನ | 29 |
| 16. Implementation of CCTV Surveillance System (ಶಾಲೆಗಳಲ್ಲಿ ಸಿ.ಸಿ.ಟಿ.ವಿ. ಅಳವಡಿಕೆ) | 29–30 |
| 17. Contribution to Kashmir Calamity Relief Fund | 31–32 |
| 18. 2014–2015ನೇ ಸಾಲಿನಲ್ಲಿ ತಾತ್ಕಾಲಿಕ ಸಿಬ್ಬಂದಿಗಳ ವೇತನ, ಅಭಿವೃದ್ಧಿ ಕಾರ್ಯ, ಇತ್ಯಾದಿಗಳ ವಿವರ | 33–35 |
| 19. ಶಿಕ್ಷಣಕ್ಕಾಗಿ ಆರ್ಥಿಕ ನೆರವು –2012–2013ನೇ ಸಾಲಿನಿಂದ ಪ್ರಾರಂಭವಾದ ಹೊಸ ಯೋಜನೆ | 36 |
| 20. Mobile Health Care Project - ಆರೋಗ್ಯ ತಪಾಸಣೆ ಮತ್ತು ಔಷದೋಪಚಾರ ಶಿಬಿರ | 37 |
| 21. P.S.Kamat Memorial District Level Inter-Collegiate Debate Competition | 37–38 |
| 22. Project Change Makers for a Better Tomorrow (ಉತ್ತಮ ನಾಳೆಗಾಗಿ ಪರಿವರ್ತನಾಗಾರರು) | 39–40 |
| 23. ದಿ. ಗಣಪತಿ ಅಣ್ಣಪ್ಪಯ್ಯ ಪೈ ಸ್ಮರಣಾರ್ಥ ಸಂಸ್ಕೃತ ಸೌರಭ ಕಾರ್ಯಕ್ರಮ | 40–41 |
| 24. ಟ್ರಸ್ಟಿಗೆ ಬರುವ ಆದಾಯದ ಕುರಿತು | 41–44 |
| 25. 2014–2015ನೇ ಸಾಲಿನಲ್ಲಿ ಟ್ರಸ್ಟಿಗೆ ದೇಣಿಗೆ ನೀಡಿದವರ ವಿವರ | 45 |
| 26. 2014–2015ನೇ ಸಾಲಿನಲ್ಲಿ ನಿವೃತ್ತಿ ಹೊಂದಿದ ಬೋಧಕ–ಬೋಧಕೇತರರು | 46–47 |
| 27. ಶೈಕ್ಷಣಿಕ ಪ್ರಗತಿ ಹಾಗೂ ಲೆಕ್ಕ ಪತ್ರ ಪರಿಶೀಲನಾ ಕಾರ್ಯಕ್ರಮ | 48–49 |
| 28. ಪ್ರಗತಿ ಪರಿಶೀಲನಾ ತಂಡದ ಸಲಹೆಗಳು | 49 |
| 29. ಆಫೀಸ ಹಾಗೂ ಲೆಕ್ಕ ಪತ್ರ ನಿರ್ವಹಣೆ ಕುರಿತು ಪರಿಶೀಲನೆಯ ವರದಿ | 50–51 |
| 30. ಸಾಮಾನ್ಯ ಸೂಚನೆಗಳು | 52 |
| 31. ಕೊನೆಯ ಮಾತು ಹಾಗೂ ಉಪಕಾರ ಸ್ಮರಣೆ | 53–55 |

# ಆಡಳಿತಾಧಿಕಾರಿ ವಾರ್ಷಿಕ ವರದಿ – 2014–2015

## 1. ಸ್ವಾಗತ ಹಾಗೂ ಉಪೋದ್ಘಾತ

ಕೆನರಾ ವೆಲ್‌ಫೇರ್ ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ, ಹಿರಿಯ ಉಪನ್ಯಾಸಕರ / ಹಿರಿಯ ಶಿಕ್ಷಕರ, ಆಫೀಸ್ ಸಿಬ್ಬಂದಿಯವರ, ಮೆನೆಜಿಂಗ ಕಮಿಟಿಯ ಸದಸ್ಯರ ಹಾಗೂ ಟ್ರಸ್ಟಿನ ಪದಾಧಿಕಾರಿಗಳ ವಾರ್ಷಿಕ ಸಭೆಯನ್ನು ಪ್ರತಿ ವರ್ಷದಂತೆ ಈ ವರ್ಷವೂ ಟ್ರಸ್ಟಿನ ಅಧ್ಯಕ್ಷರಾದ ಮಾನ್ಯ ಶ್ರೀ ಎಸ್.ಪಿ.ಕಾಮತರವರ ಸಲಹೆಯಂತೆ ಇಂದು ದಿನಾಂಕ 04–07–2015 ರಂದು ಗೋಖಲೆ ಸೆಂಟಿನರಿ ಕಾಲೇಜಿನ Audio Visual ಹಾಲಿನಲ್ಲಿ ಕರೆಯಲಾಗಿದೆ.

ಕಳೆದ 32 ವರ್ಷಗಳಿಂದ ಸಂಸ್ಥೆಯ ಮುಖ್ಯಸ್ಥರ ಸಭೆಯನ್ನು ಟ್ರಸ್ಟು ನಡೆಸಿಕೊಂಡು ಬಂದಿದೆ. ಈ ಸಭೆಯಲ್ಲಿ ಕೈಗೊಳ್ಳುವ ಪ್ರತಿಯೊಂದು ನಿರ್ಣಯಗಳ ಪ್ರಯೋಜನ ಎಲ್ಲ ಸಂಸ್ಥೆಗಳಿಗೆ ಲಭಿಸಿ ಸಂಸ್ಥೆಗಳಲ್ಲಿ ಉತ್ತಮ ಶೈಕ್ಷಣಿಕ ವಾತಾವರಣ ಮೂಡಿಬರಬೇಕು ಹಾಗೂ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಗುಣಮಟ್ಟದ ಶಿಕ್ಷಣ ದೊರೆಯಬೇಕು, ಆಡಳಿತದಲ್ಲಿ ಹಾಗೂ ಲೆಕ್ಕಪತ್ರ ನಿರ್ವಹಣೆಯಲ್ಲಿ ಪಾರದರ್ಶಕತೆ ಇರಬೇಕೆನ್ನುವದು ಅಧ್ಯಕ್ಷರ ಪ್ರಾಮಾಣಿಕ ಅನಿಸಿಕೆ ಹಾಗೂ ಕಳಕಳಿಯಾಗಿದೆ. ಅಧ್ಯಕ್ಷರ ಕಳಕಳಿಯಂತೆ ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ ಎಂದು ತಿಳಿಸಲು ಸಂತೋಷ ಪಡುತ್ತೇನೆ.

ಇಂದಿನ ಈ ಸಭೆಗೆ ಆಗಮಿಸಿದ ಟ್ರಸ್ಟಿನ ಅಧ್ಯಕ್ಷರಾದ ಮಾನ್ಯ ಶ್ರೀ ಎಸ್.ಪಿ.ಕಾಮತರವರಿಗೆ, ಟ್ರಸ್ಟಿಗಳಾದ ಪ್ರೊ. ಜಿ.ವಿ.ಭಟ್ಟರವರಿಗೆ ಹಾಗೂ ಮೆನೇಜಿಂಗ್ ಕಮಿಟಿ ಸದಸ್ಯರಾದ ಶ್ರೀ ವಿಷ್ಣು ನಾಯ್ಕರವರಿಗೆ, ಪ್ರೊ. ವಿ.ಆರ್.ವೆರ್ಣೇಕರರವರಿಗೆ, ಪ್ರೊ. ಎಂ.ಎಸ್.ಹಬ್ಬುರವರಿಗೆ, ಕಾರವಾರ ಎಜ್ಯೂಕೇಶನ್ ಸೊಸೈಟಿಯ ಕಾರ್ಯದರ್ಶಿಗಳಾದ ಶ್ರೀ ಜಿ.ಪಿ.ಕಾಮತರವರಿಗೆ ಹಾಗೂ ಅದರ ಅಂಗ ಸಂಸ್ಥೆಗಳ ಮುಖ್ಯಸ್ಥರಿಗೆ, ಗೋಖಲೆ ಸೆಂಟಿನರಿ ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಬಿ.ಎಚ್.ನಾಯಕರವರಿಗೆ, ಟ್ರಸ್ಟು ನಡೆಸುತ್ತಿರುವ ಎಲ್ಲ ಸಂಸ್ಥೆಗಳ ಮುಖ್ಯಸ್ಥರಿಗೆ, ಹಿರಿಯ ಉಪನ್ಯಾಸಕರಿಗೆ, ಹಿರಿಯ ಸಹ ಶಿಕ್ಷಕರಿಗೆ, ಆಫೀಸ ಸಹಾಯಕರಿಗೆ, ಆಮಂತ್ರಿತರಿಗೆ, ಟ್ರಸ್ಟಿನ ಪರವಾಗಿ ಹಾಗೂ ವೈಯಕ್ತಿಕವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಈ ವರ್ಷದ ಒಂದು ವಿಶೇಷವೇನೆಂದರೆ, ಟ್ರಸ್ಟಿನ ವಿವಿಧ ಹೈ ಸ್ಕೂಲುಗಳಲ್ಲಿ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಕಳೆದ ಮಾರ್ಚ್ / ಎಪ್ರಿಲ್ ತಿಂಗಳಲ್ಲಿ ನಡೆದ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪದವಿ ಪೂರ್ವ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಿದ –

ಎಸ್.ಎಸ್.ಎಲ್.ಸಿ.ಯಲ್ಲಿ Top Ten ಹಾಗೂ ಪದವಿ ಪೂರ್ವ ಪರೀಕ್ಷೆಯಲ್ಲಿ Top Five – ಹೀಗೆ ಒಟ್ಟು 15 ವಿದ್ಯಾರ್ಥಿಗಳನ್ನು ಇಂದಿನ ಸಭೆಗೆ ಆಮಂತ್ರಿಸಿ ಅವರನ್ನು ಅಭಿನಂದಿಸಬೇಕೆಂಬ ವಿಚಾರವನ್ನು ಮಾನ್ಯ ಶ್ರೀ ಎಸ್.ಪಿ.ಕಾಮತರವರಲ್ಲಿ ಪ್ರಸ್ತಾಪಿಸಿದಾಗ ಅವರು ಅತ್ಯಂತ ಸಂತೋಷದಿಂದ ಒಪ್ಪಿಗೆ ನೀಡಿ, ವಿಶೇಷ ಸಾಧನೆ ಮಾಡಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗೌರವಿಸುವದಕ್ಕಾಗಿ ಅವರನ್ನು ಇಂದಿನ ಸಭೆಗೆ ಕರೆಯುವಂತೆ ತಿಳಿಸಿದ ಪ್ರಕಾರ ಎಲ್ಲ 15 ಪ್ರತಿಭಾವಂತ ವಿದ್ಯಾರ್ಥಿಗಳನ್ನು ಕರೆಯಲಾಗಿದೆ. ಈ ಸಭೆಗೆ ಆಗಮಿಸಿದ ಎಲ್ಲ 15 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಾನು ಟ್ರಸ್ಟಿನ ಪರವಾಗಿ ಹಾಗೂ ತಮ್ಮೆಲ್ಲರ ಪರವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸಿ ಅಭಿನಂದಿಸುತ್ತೇನೆ.

ಸಾಧನೆ ಮಾಡಿದ ವಿದ್ಯಾರ್ಥಿಗಳ ವಿವರ.

## TOP 10 SCORERS FROM THE TRUST INSTITUTIONS AT SSLC - APRIL 2015

| Sl. | Name of the Student | Name of the Instituion | Marks | Out of | Result % |
|---|---|---|---|---|---|
| 1 | **Mr. Sachetan Ganapati Sabahit** | JV Dandeli | 614 | 625 | **98.24** |
| 2 | **Ms. Deeksha Prabhakar Bhat** | JV Kadtoka | 613 | 625 | **98.08** |
| 3 | **Mr. Subham Dashrath Koravi** | JV Dandeli | 611 | 625 | **97.76** |
| 4 | **Ms. Akshata D Hegde** | JV Kulve-Baroor | 609 | 625 | **97.44** |
| 5 | **Ms. Suha Basheer Shaikh** | PM (Eng M.) HS Ankola | 609 | 625 | **97.44** |
| 6 | **Ms. Suma G Naik** | PM (Eng M.) HS Ankola | 605 | 625 | **96.80** |
| 7 | **Ms. Spoorti S Naik** | PM (Eng M.) HS Ankola | 600 | 625 | **96.00** |
| 8 | **Mr. Yashwant S Hongekar** | JV Dandeli | 599 | 625 | **95.84** |
| 9 | **Ms. Roopa Maruti Shet** | JV Anilgod | 596 | 625 | **95.36** |
| 10 | **Ms. Muskaan Khan** | PM (Eng M.) HS Ankola | 595 | 625 | **95.20** |

## TOP 5 SCORERS FROM THE TRUST INSTITUTIONS AT PU II - APRIL 2015

| Sl. | Name of the Student | Stream | Name of the Institution | Marks | Out of | Result % |
|---|---|---|---|---|---|---|
| 1 | **Ms. Sinchana R Nayak** | Science | GCPUCollege-Ankola | 554 | 600 | **92.33** |
| 2 | **Ms. Pragati G K** | Commerce | Divekar PU College-Karwar | 553 | 600 | **92.17** |
| 3 | **Ms. Varsha B Pai** | Commerce | Divekar PU College-Karwar | 547 | 600 | **91.17** |
| 4 | **Ms. Vinuta M Naik** | Commerce | JVCPUC-Shirali | 545 | 600 | **90.83** |
| 5 | **Ms. Aditi A Bandekar** | Commerce | Divekar PU College-Karwar | 539 | 600 | **89.83** |

ಈಗ ಈ ಎಲ್ಲ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಪಿ.ಕಾಮತರವರು ಹಾಗೂ ಧರ್ಮದರ್ಶಿಗಳಾದ ಪ್ರೊ.ಜಿ.ವಿ.ಭಟ್ಟರು ಅಭಿನಂದಿಸಿ ಪ್ರಶಸ್ತಿ ಪತ್ರವನ್ನು ವಿತರಿಸಲಿದ್ದಾರೆ.

ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಉತ್ತಮ ಗುಣಮಟ್ಟದ ಶೈಕ್ಷಣಿಕ ವಾತಾವರಣ ನಿರ್ಮಾಣ ಮಾಡುವ ಹಾಗೂ ಮೂಲಭೂತ ಸೌಕರ್ಯ ಒದಗಿಸುವ ಕುರಿತು ಅಧ್ಯಕ್ಷರು ಇಂದಿನ ಸಭೆಯಲ್ಲಿ ಚರ್ಚಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳಲಿದ್ದಾರೆ. ಟ್ರಸ್ಟು ನಡೆಸುತ್ತಿರುವ ಈ ವಾರ್ಷಿಕ ಸಭೆ ಶೈಕ್ಷಣಿಕ ದೃಷ್ಟಿಯಿಂದ, ಅಭಿವೃದ್ಧಿ ದೃಷ್ಟಿಯಿಂದ, ಆಡಳಿತಾತ್ಮಕ ದೃಷ್ಟಿಯಿಂದ ಹಾಗೂ ಸಂಪನ್ಮೂಲ ಕ್ರೋಢಿಕರಿಸುವ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿರುತ್ತದೆ. ಆದ್ದರಿಂದ ಸಭೆಗೆ ಆಗಮಿಸಿದ ಎಲ್ಲರೂ ಚರ್ಚೆಯಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವ ಅವಶ್ಯಕತೆ ಇದೆ.

ಟ್ರಸ್ಟು ನಡೆಸುತ್ತಿರುವ ಎಲ್ಲ ಸಂಸ್ಥೆಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಮಾಹಿತಿ, ಹಾಜರಾತಿ, ಪರೀಕ್ಷಾ ಪರಿಣಾಮ, ಸಿಬ್ಬಂದಿಗಳ ಸಮಗ್ರ ಮಾಹಿತಿ, ಲೆಕ್ಕ ಪತ್ರ ನಿರ್ವಹಣೆ, ಮುಂತಾದ ವಿಷಯಗಳ ಕುರಿತು ಮಾಹಿತಿಯನ್ನು online ಮೂಲಕ ಟ್ರಸ್ಟ್ ಆಫೀಸಿನಲ್ಲಿ ಪಡೆಯಲಾಗುತ್ತದೆ. ಸಂಸ್ಥೆಗಳು ಕೇಂದ್ರ ಕಛೇರಿಯಿಂದ ಕೇಳಿದ ಮಾಹಿತಿಗಳನ್ನು ಕೂಡಲೆ email ಮೂಲಕ ಕಳುಹಿಸಲು ಅನುಕೂಲವಾಗಿದೆ.

ಟ್ರಸ್ಟಿನ website - www.kwtankola.com ಕಾರ್ಯ ನಿರ್ವಹಿಸುತ್ತಿದೆ. ಈ Website ಮೂಲಕ ಟ್ರಸ್ಟಿನ ಮಾಹಿತಿಯನ್ನು ಕಾರ್ಯ–ಚಟುವಟಿಕೆಯನ್ನು ಅಂತರಜಾಲದ ಮೂಲಕ ಜಗತ್ತಿನ ಯಾವದೇ ಸ್ಥಳದಿಂದ ವೀಕ್ಷಿಸಬಹುದಾಗಿದೆ. ಟ್ರಸ್ಟಿನ ಸಂಸ್ಥೆಗಳಲ್ಲಿ ನಡೆಯುತ್ತಿರುವ ವಿಶೇಷ ಕಾರ್ಯಕ್ರಮ, ಸಾಧನೆ, ಅಭಿವೃದ್ಧಿ ಕಾರ್ಯಗಳಿದ್ದರೆ ಅವುಗಳ ಕುರಿತು ಕಾಲಕಾಲಕ್ಕೆ ಮಾಹಿತಿಯನ್ನು ಸಲ್ಲಿಸುತ್ತಿರಬೇಕು. ಎಲ್ಲ ಸಂಸ್ಥೆಗಳು ಈ ಬಗ್ಗೆ ಗಮನ ಹರಿಸಿ ಕಾರ್ಯ ಪ್ರವೃತ್ತರಾದರೆ ಆಡಳಿತಾತ್ಮಕವಾಗಿ ಹಾಗೂ website update ಮಾಡಲು ತುಂಬಾ ಸಹಕಾರಿಯಾಗುತ್ತದೆ. ಇದುವರೆಗೆ ಟ್ರಸ್ಟಿನಲ್ಲಿ ನಡೆಯುತ್ತಿರುವ ಕಾರ್ಯ ಚಟುವಟಿಕೆಯ ಮಾಹಿತಿ website ನಲ್ಲಿ update ಮಾಡಲಾಗಿದೆ.

Internet ಸೌಲಭ್ಯವಿಲ್ಲದ ಸಂಸ್ಥೆಗಳಾದ ಕಡವಾಡ, ಕತಗಾಲ ಮತ್ತು ಬೇಡ್ಕಣಿ ಈ ಶಾಲೆಯ ಮುಖ್ಯಾಧ್ಯಾಪಕರು ಕೂಡಲೆ ಇಂಟರನೆಟ ಸೌಲಭ್ಯ ಪಡೆಯಬೇಕು. ಇಂಟರ್‌ನೆಟ್ ಸೌಲಭ್ಯ ಕೂಡಲೆ ಪಡೆಯುವಂತೆ ಸಂಸ್ಥೆಯ ಮುಖ್ಯಸ್ಥರಿಗೆ ಶೈಕ್ಷಣಿಕ ಪರಿಶೀಲನಾ ಸಂದರ್ಭದಲ್ಲಿ ಹಾಗೂ ಪತ್ರದ ಮೂಲಕ ತಿಳಿಸಲಾಗಿದೆ. ಆದರೂ ಕೆಲವು ಮುಖ್ಯಾಧ್ಯಾಪಕರು ಈ ಬಗ್ಗೆ ಗಮನ ಹರಿಸಿರುವದಿಲ್ಲ. 2015–16ನೇ ಸಾಲಿನಲ್ಲಾದರೂ ಇಂಟರ್ನೇಟ್ ಸೌಲಭ್ಯ ಕಡ್ಡಾಯವಾಗಿ ಪಡೆದು ಅದರ ಪ್ರಯೋಜನ ಪಡೆಯಬೇಕು.

2014–2015ನೇ ಶೈಕ್ಷಣಿಕ ವರ್ಷದಲ್ಲಿ ಟ್ರಸ್ಟಿನ ವಿವಿಧ ಶಿಕ್ಷಣ ಸಂಸ್ಥೆಗಳು ನಿರ್ವಹಿಸಿದ ಶೈಕ್ಷಣಿಕ ಕಾರ್ಯ ಚಟುವಟಿಕೆ, ಅಭಿವೃದ್ಧಿ ಕೆಲಸಗಳು, ವಿದ್ಯಾರ್ಥಿಗಳ ಸಾಧನೆ, ಪರೀಕ್ಷಾ ಪರಿಣಾಮ, ಲೆಕ್ಕಪತ್ರ ನಿರ್ವಹಣೆ ಮುಂತಾದ ವಿಷಯಗಳ ಅಂಕಿಸಂಖ್ಯೆಗಳನ್ನೊಳಗೊಂಡ ವರದಿಯನ್ನು ತಮ್ಮ ಮುಂದೆ ಸಾದರ ಪಡಿಸುತ್ತಿದ್ದೇನೆ.

## 2. ಆದರ್ಶಗಳ ಬೆಳಕಿನಲ್ಲಿ

ಕೆನರಾ ವೆಲ್‌ಫೆರ್ ಟ್ರಸ್ಟು 1953ರಲ್ಲಿ ಡಾ. ದಿನಕರ ದೇಸಾಯಿಯವರ ಅಧ್ಯಕ್ಷತೆಯಲ್ಲಿ ಸ್ಥಾಪನೆಗೊಂಡು ಉತ್ತರ ಕನ್ನಡ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ಹಾಗೂ ಇನ್ನಿತರ ಸೇವಾ ಸಂಸ್ಥೆಗಳನ್ನು ಪ್ರಾರಭಿಸಿ ಶಿಕ್ಷಣ ಕ್ರಾಂತಿಗೆ ಚಾಲನೆ ನೀಡಿದರು. ಉತ್ತರ ಕನ್ನಡ ಜಿಲ್ಲೆಯ ಜನರು ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಭಾಗದ ಜನರು ಶಿಕ್ಷಣದಿಂದ ವಂಚಿತರಾಗಬಾರದೆಂಬ ಕನಸನ್ನು ನನಸು ಮಾಡಿದರು. ಇಂದು ಕೆನರಾ ವೆಲ್‌ಫೆರ್ ಟ್ರಸ್ಟು ಸಾರ್ಥಕ 62 ವರ್ಷಗಳನ್ನು ಪೂರೈಸಿ 63ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ.

ಡಾ. ದಿನಕರ ದೇಸಾಯಿಯವರ ನಂತರ, ಅಂದರೆ 1982 ರಿಂದ ಮಾನ್ಯ ಶ್ರೀ ಎಸ್.ಪಿ.ಕಾಮತರವರು ಟ್ರಸ್ಟಿನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು, ಕಳೆದ 33 ವರ್ಷಗಳಿಂದ ಟ್ರಸ್ಟನ್ನು ಅತ್ಯಂತ ಯಶಸ್ವಿಯಾಗಿ, ಅರ್ಥಪೂರ್ಣವಾಗಿ ನಡೆಸಿಕೊಂಡು ಬಂದಿದ್ದಾರೆ. ಡಾ. ದಿನಕರ ದೇಸಾಯಿಯವರು ನಂಬಿದ್ದ ಆದರ್ಶಗಳ ಮುಂಬೆಳಕಿನಲ್ಲಿ ಇಂದು ಟ್ರಸ್ಟು ಶ್ರೀ ಎಸ್.ಪಿ.ಕಾಮತರವರ ಮಾರ್ಗದರ್ಶನದಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಕಾರವಾರದ ದಿವೇಕರ ವಾಣಿಜ್ಯ ಕಾಲೇಜಿನಲ್ಲಿ M.Com ಸ್ನಾತ್ತಕೋತ್ತರ ಕೇಂದ್ರವನ್ನು, 6 ಪದವಿ ಪೂರ್ವ ಕಾಲೇಜುಗಳನ್ನು, 4 ಪದವಿ ಕಾಲೇಜುಗಳನ್ನು, 17 ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರೌಢ ಶಾಲೆಗಳನ್ನು, 10 ಪೂರ್ವ ಹಾಗೂ ಪ್ರಾಥಮಿಕ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆಗಳನ್ನು ಹಾಗೂ 7 ಇನ್ನಿತರ ಸೇವಾ ಸಂಸ್ಥೆಗಳನ್ನು, ಹೀಗೆ ಒಟ್ಟು 45 ಸಂಸ್ಥೆಗಳನ್ನು ಟ್ರಸ್ಟು ನಡೆಸುತ್ತಿದೆ.

## 3. 19 ಜುಲೈ 2014 ರಂದು ನಡೆದ ವಾರ್ಷಿಕ ಸಭೆಯಲ್ಲಿ ಅಧ್ಯಕ್ಷರು ಉಲ್ಲೇಖಿಸಿದ ಕೆಲವು ವಿಚಾರಗಳು

ಕಳೆದ ವರ್ಷ ದಿನಾಂಕ 19 ಜುಲೈ 2014 ರಂದು ನಡೆದ ವಾರ್ಷಿಕ ಸಭೆಯಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಪಿ.ಕಾಮತರವರು ಉಲ್ಲೇಖಿಸಿದ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ.



1. ಕಳೆದ 32 ವರ್ಷಗಳಿಂದ ವಾರ್ಷಿಕ ಸಭೆಗಳನ್ನು ನಡೆಸಿಕೊಂಡು ಬಂದಿದ್ದು, ಪ್ರತಿ ವರ್ಷ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯಗಳನ್ನು ಅನುಷ್ಠಾನಕ್ಕೆ ತಂದಿರುವ ಕಾರ್ಯ ಕ್ಷಮತೆಯ ಬಗ್ಗೆ ಸಂತೋಷ ವ್ಯಕ್ತಪಡಿಸುತ್ತ, ಈ ಸಭೆಯಲ್ಲಿರುವ ಬಹಳಷ್ಟು ಜನ ಈ 32 ವರ್ಷದ ಕಾರ್ಯಕಲಾಪವನ್ನು ನೋಡಿರಲಿಕ್ಕಿಲ್ಲ ಆದರೆ ವೇದಿಕೆಯಲ್ಲಿರುವ ಪ್ರೊ. ಜಿ.ವಿ.ಭಟ್ಟ, ಶ್ರೀ ವಿಷ್ಣು ನಾಯ್ಕ, ಪ್ರೊ. ಎಂ.ಎಸ್.ಹಬ್ಬು, ಪ್ರೊ. ವಿ.ಆರ್.ವೆರ್ಣೇಕರ, ಶ್ರೀ ಕೃಷ್ಣಾನಂದ ಶೆಟ್ಟಿ, ಮುಂತಾದವರು ಕಾರ್ಯಕಲಾಪದಲ್ಲಿ ಭಾಗವಹಿಸಿದ್ದು ಇದಕ್ಕೆ ಸಾಕ್ಷಿಯಾಗಿದೆ.
2. ಟ್ರಸ್ಟು ಯಾವುದರ ಬಗ್ಗೆ ವಾಗ್ದಾನ ಮಾಡುತ್ತದೆ ಅದು ಕೇವಲ ಭರವಸೆ ಆಗಿ ಇರುವದಿಲ್ಲ. ಈಡೇರುತ್ತದೆ. ಈಡೇರುವಂತೆ ನಾವು ಮಾಡುತ್ತೇವೆ. ಈ ಉದ್ದೇಶಕ್ಕಾಗಿ ಟ್ರಸ್ಟಿನ ಪ್ರತಿಯೊಬ್ಬರ ಕೊಡುಗೆಯು (share) ಇರಬೇಕೆಂಬುದು ನಾವು ಬಯಸುತ್ತೇವೆ. ಇದು ಕೇವಲ ನಮಗೆ ಸೀಮಿತವಾದ ಮಾತಲ್ಲ, ಇಡೀ ವಿಶ್ವಮಂಡಳದ ನಿಯಮವೇ ಹಾಗಿದೆ. ಒಂದಕ್ಕೆ ಇನ್ನೊಂದು ಅವಲಂಬಿಯಾಗಿದೆ. ಒಂದರ ಪ್ರಭಾವ ಇನ್ನೊಂದಕ್ಕಿದೆ. ಅವು ತಮ್ಮಷ್ಟಕ್ಕೇ ಈ ವಿಶ್ವವನ್ನು ಸಮತೋಲವಾಗಿ ಹಿಡಿದಿಟ್ಟಿದೆ. ಈ ಜಗತ್ತು, ಈ ಭೂಮಿ, ಈ ಭೂಮಿಯೊಳಗಿನ ನಾವು, ನೀವು ಎಲ್ಲ ಒಟ್ಟಾರೆ ಈ 'Mechanism'ನ ಭಾಗವಾಗಿದ್ದೇವೆ.
3. ಎಷ್ಟೋ ಸಲ ಯಾಕೆ ನಮ್ಮ ಸುತ್ತ ತಪ್ಪುಗಳಾಗುತ್ತವೆಂದು ನಮಗೆ, ನಿಮಗೆ ಗೊತ್ತಿರುವದಿಲ್ಲ. ಆ ತಪ್ಪಿಗೆ ನಾವು ಹೊಣೆಗಾರರಾಗಿರುತ್ತೇವೆ. ಕರ್ತವ್ಯ ವಿಮುಖತೆಯೂ ನಾವು ಮಾಡುವ ಲೋಪಗಳಲ್ಲೊಂದು. ನಾವೆಲ್ಲರೂ ಒಳ್ಳೆಯ ಕೆಲಸದಲ್ಲಿ ತೊಡಗಿಸಿಕೊಳ್ಳುವದು, ಕರ್ತವ್ಯ ವಿಮುಖರಾಗದೆ ಇರುವದು ತೀರಾ ಅವಶ್ಯವಿರುತ್ತದೆ.
4. ಟ್ರಸ್ಟಿನ ಧೇಯ ವಾಕ್ಯವೇ "ಶಿಕ್ಷಣದ ಮೂಲಕ ಸಾಮಾಜಿಕ ಪರಿವರ್ತನೆ". ಈ ಧ್ಯೇಯ ವಾಕ್ಯವನ್ನು ನಾವು ಗಂಭೀರವಾಗಿ ಸ್ವೀಕರಿಸಿ ಹೆಜ್ಜೆ ಇಡಬೇಕಾಗಿದೆ. ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುವ ಎಲ್ಲಾ ಸಿಬ್ಬಂದಿಗಳು ತಮ್ಮ ತಾಬಾ ಇರುವ ಮಕ್ಕಳ ಭವಿಷ್ಯದ ಬಗ್ಗೆ ವಿಶೇಷ ಗಮನ ಹರಿಸುವದು ನಮ್ಮ ಕರ್ತವ್ಯದ ಭಾಗವಾಗಿದೆ. ನಮ್ಮ ಸುತ್ತಲಿನ ಸಾಮಾಜಿಕ, ಆರ್ಥಿಕ, ಆರೋಗ್ಯ ಮತ್ತಿತರ ಸಮಸ್ಯೆಗಳ ಬಗ್ಗೆಯೂ ಸದುದ್ದೇಶದಿಂದ ಸಹಾಯ ಹಸ್ತ ಚಾಚ ಬೇಕಾದದ್ದಿದೆ.

## 4. ಶೈಕ್ಷಣಿಕ ಹಾಗೂ ಸಾಮಾಜಿಕ ವಿಚಾರದ ಕುರಿತು ಟ್ರಸ್ಟಿನ ಧ್ಯೇಯ

1. ಟ್ರಸ್ಟಿನ ಸಂಸ್ಥೆಗಳಲ್ಲಿ ಕಲಿಯುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಸಿಗುವುದರ ಜೊತೆಗೆ ಶಾಲಾ, ಕಾಲೇಜುಗಳಲ್ಲಿ ಒಳ್ಳೆಯ ವಾತಾವರಣ, ಒಳ್ಳೆಯ ಪರಿಸರ ದೊರೆಯುವಂತೆ ಪ್ರಯತ್ನಿಸುವದು, ಶಿಕ್ಷಣದ ಗುಣ ಮಟ್ಟ ಸುಧಾರಿಸುವದರ ಜೊತೆಗೆ ಪಠ್ಯ ಪಠ್ಯೇತರ ವಿಷಯದಲ್ಲಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡುವಂತೆ ಎಲ್ಲ ಮುಲಭೂತ ಸೌಲಭ್ಯ ಒದಗಿಸಿ ಶಿಕ್ಷಣದಲ್ಲಿ ಮಹತ್ವಪೂರ್ಣ ಬದಲಾವಣೆ ತರುವಲ್ಲಿ ಎಲ್ಲರೂ ಪ್ರಾಮಾಣಿಕವಾದ ಪ್ರಯತ್ನ ಮಾಡುವದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

2. "ಶಿಕ್ಷಣದ ಮೂಲಕ ಸಾಮಾಜಿಕ ಬದಲಾವಣೆ" ಎಂಬ ಟ್ರಸ್ಟಿನ ನಿಲುವನ್ನು ಮನಸಾ ಸ್ವೀಕರಿಸಿ ಆಯಾ ಭಾಗಗಳಲ್ಲಿ ಟ್ರಸ್ಟಿನ ಶಿಕ್ಷಣ ಸಂಸ್ಥೆಗಳು ಸಮಾಜಸೇವಾ ಕಾರ್ಯಕ್ಕೆ ತಮ್ಮನ್ನು ತೊಡಗಿಸಿಕೊಂಡು ಕಾರ್ಯ ನಿರ್ವಹಿಸುವದು.
3. ಪರಿಹಾರ ಬೋಧನಾ ಕಾರ್ಯವನ್ನು ಹೆಚ್ಚು ಸಮರ್ಪಕವಾಗಿ ಎಲ್ಲ ಶಾಲೆಗಳಲ್ಲಿಯೂ ನಿರ್ವಹಿಸುವಂತೆ ಹಾಗೂ ಪರೀಕ್ಷಾ ಫಲಿತಾಂಶ ಉತ್ತಮ ಪಡಿಸುವದರ ಜೊತೆಗೆ ಪ್ರತಿಭಾವಂತ ವಿದ್ಯಾರ್ಥಿಗಳ ಬಗ್ಗೆಯೂ ಹೆಚ್ಚಿನ ಗಮನ ಹರಿಸಿ ಅವರ ಸಾಧನೆ ರಾಜ್ಯಮಟ್ಟದಲ್ಲಿ ಗುರುತಿಸುವಂತೆ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುವದು.
4. ಪಠ್ಯೇತರ ಚಟುವಟಿಕೆಗಳಲ್ಲೂ ಕೂಡಾ ವಿಶೇಷ ಗಮನ ಹರಿಸಿ, ಪ್ರತಿಭೆಯುಳ್ಳ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ದಿಕ್ಕಿನಲ್ಲಿ ಗಮನ ಹರಿಸುವದು.
5. ಗ್ರಾಮೀಣ ಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಟ್ರಸ್ಟಿನ ಸಂಸ್ಥೆಗಳು ಸಾಕ್ಷರತೆ ಪ್ರಮಾಣ ನೂರಕ್ಕೆ ನೂರರಷ್ಟು ಆಗುವಂತೆ ಸ್ವಯಂಪ್ರೇರಣೆಯಿಂದ ಕಾರ್ಯಯೋಜನೆಗಳನ್ನು ಹಾಕಿಕೊಂಡು ಅದನ್ನು ಜಾರಿಗೆ ತರುವಲ್ಲಿ ಸಂಸ್ಥೆಯ ಸಿಬ್ಬಂದಿಗಳನ್ನು ಹಾಗೂ ವಿದ್ಯಾರ್ಥಿಗಳನ್ನು ಸಾಮೂಹಿಕವಾಗಿ ತೊಡಗಿಸಿಕೊಂಡು ಪ್ರಯತ್ನಿಸುವದು.
6. ಸರಕಾರದ ಮಳೆಕೊಯ್ಲು ಯೋಜನೆ, ಸಂಪೂರ್ಣ ನಿರ್ಮಲಗ್ರಾಮ ಯೋಜನೆಗಳಿಗೆ ನಮ್ಮ ಸಂಸ್ಥೆಗಳು ತಮ್ಮ ಭಾಗಗಳಲ್ಲಿ ಕೈಜೋಡಿಸಿ ಅವು ಯಶಸ್ವಿಯಾಗುವಂತೆ ನೋಡಿಕೊಳ್ಳುವದು.
7. ಪ್ರತಿಯೊಂದು ಸಂಸ್ಥೆಯವರು (ಪ್ರಾಥಮಿಕ, ಪ್ರೌಢ ಮತ್ತು ಕಾಲೇಜುಗಳು ಸೇರಿದಂತೆ) ಕಡ್ಡಾಯವಾಗಿ ಪಾಲಕರ ಸಭೆಯನ್ನು ಕರೆದು ವಿದ್ಯಾರ್ಥಿಗಳ ಶೈಕ್ಷಣಿಕ ವಿಚಾರವಾಗಿ, ನಡವಳಿಕೆಯ ವಿಚಾರವಾಗಿ, ಹಾಜರಾತಿಯ ವಿಚಾರವಾಗಿ ಮುಕ್ತವಾಗಿ ಚರ್ಚಿಸಿ ಸಲಹೆ–ಸೂಚನೆಗಳನ್ನು ನೀಡುವದು ಮತ್ತು ಅವರಿಂದ ಬರುವ ಸಲಹೆ ಸೂಚನೆಗಳಿದ್ದರೆ, ಆಕ್ಷೇಪಗಳಿದ್ದರೆ ಅವನ್ನು ದಾಖಲೆಗೊಳಪಡಿಸಿ ಪರಿಹಾರದ ದಾರಿ ಕಂಡುಕೊಳ್ಳುವದು.
8. ಒಟ್ಟಾರೆಯಾಗಿ ಶಿಕ್ಷಕರು ತಮ್ಮ ಕ್ರಿಯಾಶೀಲತೆಯನ್ನು ಹೆಚ್ಚಿಸಿಕೊಂಡು, ತಾವು ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಿ ವಿದ್ಯಾರ್ಥಿಗಳ, ಪಾಲಕರ ಹಾಗೂ ಸಮಾಜದ ಗೌರವ ಸಂಪಾದಿಸಿಕೊಂಡು ಕಾರ್ಯ ನಿರ್ವಹಿಸುವದು.

ಟ್ರಸ್ಟಿನ ಧ್ಯೇಯ ಹಾಗೂ ಸಾಮಾಜಿಕ ಚಿಂತನೆಗಳ ಕುರಿತು ದಿನಾಂಕ 19 ಜುಲೈ 2014 ರಂದು ನಡೆದ ಟ್ರಸ್ಟಿನ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ ಸಭೆಯಲ್ಲಿ ಅಧ್ಯಕ್ಷರು ಚರ್ಚಿಸಿ ಎಲ್ಲ ಸಂಸ್ಥೆಗಳ ಮುಖ್ಯಸ್ಥರು ಈ ಯೋಜನೆಗಳನ್ನು ಪ್ರಾಮಾಣಿಕವಾಗಿ ಕಾರ್ಯರೂಪಕ್ಕೆ ತರುವಂತೆ ಪ್ರಯತ್ನಿಸಬೇಕೆಂದು ಸಲಹೆ ನೀಡಿದ್ದರು. ಈ ಸಲಹೆಯನ್ನು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ತರಲಾಗಿದೆ ಎನ್ನುವದರ ಬಗ್ಗೆ ಸಂಸ್ಥೆಯ ಮುಖ್ಯಸ್ಥರು ತಮ್ಮ ವರದಿಯಲ್ಲಿ ಸಂಕ್ಷಿಪ್ತವಾಗಿ ತಿಳಿಸಬೇಕು.

## 5. ಕಳೆದ ವಾರ್ಷಿಕ ಸಭೆಯಲ್ಲಿ ಸ್ವೀಕರಿಸಿದ ನಿರ್ಣಯಗಳು ಹಾಗೂ ಅವುಗಳ ಅನುಷ್ಠಾನದ ಕುರಿತು

| ಸ್ವೀಕರಿಸಿದ ನಿರ್ಣಯಗಳು: | ಅಂಗೀಕರಿಸಿದ ನಿರ್ಣಯ ಅನುಷ್ಠಾನದ ಕುರಿತು |
|---|---|
| 1. 2014–15ನೇ ಸಾಲಿನಲ್ಲಿ ಟ್ರಸ್ಟು ನಡೆಸುತ್ತಿರುವ ಎಲ್ಲ ಶಾಲೆ–ಕಾಲೇಜುಗಳಲ್ಲಿ ಹಾಗೂ ಇನ್ನಿತರ ಸೇವಾ ಸಂಸ್ಥೆಗಳಲ್ಲಿ ಪ್ಲಾ ಸ್ಟಿಕ್ ಹಾಗೂ ಇನ್ನಿತರ ತ್ಯಾಜ್ಯ ವಸ್ತುಗಳ ನಿರ್ಮೂಲನ ವರ್ಷವೆಂದು ಆಚರಿಸಲು ಹಾಗೂ ಈ ಕುರಿತು ಎಲ್ಲ ಸಂಸ್ಥೆಗಳು ಕಾರ್ಯ ಯೋಜನೆ ಹಾಕಿಕೊಂಡು, ಸಾಧಿಸಿದ ಪ್ರಗತಿ ಬಗ್ಗೆ ಟ್ರಸ್ಟಿಗೆ ಕಾಲಕಾಲಕ್ಕೆ ವರದಿ ಸಲ್ಲಿಸಬೇಕು. | **ಟ್ರಸ್ಟು ನಡೆಸುತ್ತಿರುವ ಎಲ್ಲ ಶಾಲೆ–ಕಾಲೇಜುಗಳಲ್ಲಿ ಪ್ಲಾ ಸ್ಟಿಕ್ ಹಾಗೂ ಇನ್ನಿತರ ತ್ಯಾಜ್ಯ ವಸ್ತುಗಳ ನಿರ್ಮೂಲನ ವರ್ಷವೆಂದು ಆಚರಿಸಲು ತಿಳಿಸಲಾಗಿತ್ತು. ಎಲ್ಲ ಸಂಸ್ಥೆಗಳಿಗೆ ಬೇಕಾದ ಪೋಸ್ಟರ್ ಹಾಗೂ ಕರಪತ್ರಗಳನ್ನು ಪೂರೈಸಲಾಗಿದೆ. ಎಲ್ಲ ಸಂಸ್ಥೆಗಳು ಈ ಬಗ್ಗೆ ಗಮನ ಹರಿಸಿ ವಿದ್ಯಾರ್ಥಿಗಳಲ್ಲಿ, ಪಾಲಕರಲ್ಲಿ ತಿಳುವಳಿಕೆ ನೀಡುವ ಕೆಲಸ ಮಾಡಿದ್ದಾರೆ. ಶಾಲೆಯ ಆವರಣದಲ್ಲಿ, ಕ್ಲಾಸ್‌ರೂಮಿನಲ್ಲಿ ಪ್ಲಾ ಸ್ಟಿಕ್ ಮುಕ್ತವನ್ನಾಗಿ ಮಾಡಲು ಕ್ರಮ ಕೈಗೊಂಡಿದ್ದಾರೆ. ಈ ಕೆಲಸ ನಿರಂತರವಾಗಿ ನಡೆಯಬೇಕಾಗಿದೆ.**<br><br>**ಪಿ.ಎಂ.ಪ್ರೌಢ ಶಾಲೆಯ ವಿದ್ಯಾರ್ಥಿಗಳು ಹಾಗೂ ಎಲ್ಲ ಶಿಕ್ಷಕ ವೃಂದದವರು ಪ್ರಧಾನ ಮಂತ್ರಿಯವರ ಸ್ವಚ್ಛತಾ ಅಭಿಯಾನ ಕಾರ್ಯದಲ್ಲಿ ಅದರಲ್ಲಿ ಪ್ರಮುಖವಾಗಿ ಅಂಕೋಲಾ ನಗರ ಮತ್ತು ಸುತ್ತಮುತ್ತಲಿನ ಸ್ಥಳಗಳಲ್ಲಿ ಸ್ವಚ್ಛತಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಾರ್ವಜನಿಕರ ಪ್ರಶಂಸೆಗೆ ಪಾತ್ರರಾಗಿದ್ದಾರೆ.** |
| 2. ಟ್ರಸ್ಟಿನ ಸಂಸ್ಥೆಗಳಲ್ಲಿ ಯಾವ ಯಾವ ಸಂಸ್ಥೆಗಳು ಇದುವರೆಗೆ ಸುವರ್ಣ ಮಹೋತ್ಸವವನ್ನು ಆಚರಿಸಿರುವದಿಲ್ಲವೋ ಆ ಸಂಸ್ಥೆಗಳು ಈ ವರ್ಷ ಆಚರಿಸಿ ಟ್ರಸ್ಟಿನ ವಜ್ರಮಹೋತ್ಸವ ಅಭಿವೃದ್ಧಿ ಕಾರ್ಯಕ್ಕೆ ಸಂಪನ್ಮೂಲ ಕ್ರೋಢೀಕರಿಸಬೇಕು. | **ಸುವರ್ಣ ಮಹೋತ್ಸವ ಆಚರಿಸಿದ ಸಂಸ್ಥೆಗಳು ಈ ವರ್ಷ ಆಚರಿಸಿ ಟ್ರಸ್ಟಿನ ವಜ್ರ ಮಹೋತ್ಸವದ ಅಭಿವೃದ್ಧಿ ಕಾರ್ಯಕ್ಕೆ ಸಂಪನ್ಮೂಲ ಕ್ರೋಡಿಕರಿಸಬೇಕು.** |
| 3. ಮಹಿಳಾ ಜಾಗ್ರತಿ ಮತ್ತು ಸುರಕ್ಷತೆಗೆ ಟ್ರಸ್ಟಿನ ಎಲ್ಲಾ ಶಿಕ್ಷಣ ಸಂಸ್ಥೆಗಳು 2014–15ನೇ ಸಾಲಿನಲ್ಲಿ ವಿಶೇಷ ಒತ್ತು ನೀಡಿ ಕಾರ್ಯಕ್ರಮ ರೂಪಿಸಬೇಕು. | **ಮಹಿಳಾ ಜಾಗ್ರತಿ ಮತ್ತು ಸುರಕ್ಷತೆಗೆ ಟ್ರಸ್ಟಿನ ಎಲ್ಲಾ ಸಂಸ್ಥೆಗಳು ವಿಶೇಷ ಒತ್ತು ನೀಡಿದ್ದಾರೆ. ಸಂಸ್ಥೆಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿ, ವಿದ್ಯಾರ್ಥಿಗಳ, ಪಾಲಕರ, ಅಭಿವೃದ್ಧಿ ಸಮಿತಿಯ, ಊರಗಣ್ಯರ ಸಭೆ ಕರೆದು ತಿಳುವಳಿಕೆ ನೀಡುವ ಕಾರ್ಯ ಮಾಡಿದ್ದಾರೆ. ಇದು ಕೂಡಾ ನಿರಂತರವಾಗಿ ನಡೆಯಬೇಕು.** |

| | |
|---|---|
| 4. 2014–15ನೇ ಸಾಲಿನಲ್ಲಿ ಟ್ರಸ್ಟಿನ ಸಂಸ್ಥೆಗಳ ಸ್ಥಾಪನೆಯ ಕುರಿತು ದಾಖಲೆಗಳನ್ನು ಸಂಗ್ರಹಿಸಿ ಆ ಬಗ್ಗೆ ಒಂದು ಸಂಕ್ಷಿಪ್ತ ವರದಿಯನ್ನು ತಯಾರಿಸಿ ಅದರ ಒಂದು ಪ್ರತಿಯನ್ನು ಟ್ರಸ್ಟಿಗೆ ಕಳುಹಿಸುವದು. | **ಟ್ರಸ್ಟಿನ ಸಂಸ್ಥೆಗಳ ಸ್ಥಾಪನೆ ಕುರಿತು ದಾಖಲೆ ಸಂಗ್ರಹಿಸಿ ಸಂಕ್ಷಿಪ್ತ ವರದಿ ಯಾವ ಸಂಸ್ಥೆಯಿಂದಲೂ ಬಂದಿರುವದಿಲ್ಲ. ಈ ವರ್ಷ ಇದನ್ನು ಗಮನದಲ್ಲಿಟ್ಟು ವರದಿ ಸಲ್ಲಿಸಲು ಕೋರಿದೆ.** |
| 5. ಪ್ರತಿಯೊಂದು ಸಂಸ್ಥೆಯ ಚರ ಮತು ಸ್ಥಿರ ಆಸ್ತಿಗಳೇ ಟ್ರಸ್ಟಿನ ದೊಡ್ಡ ಸಂಪತ್ತು. ಸಂಸ್ಥೆಗಳ ಹೆಸರಿನಲ್ಲಿರುವ ಎಲ್ಲ ಭೂಮಿ ಸರ್ಕಾರಿ ದಾಖಲೆಯಲ್ಲಿ ಸರಿಯಾಗಿ ನಮೂದಾಗಿದೆಯೇ ಎಂಬುದನ್ನು ಪರಿಶೀಲಿಸಿ ರಿಕಾರ್ಡನ್ನು ಪಡೆದುಕೊಳ್ಳುವದು. ಸಂಸ್ಥೆಯ ಹೆಸರಿನಲ್ಲಿರುವ ಭೂಮಿಯ ಹಾಗೂ ಸ್ಥಿರ ಆಸ್ತಿಯ ಗಡಿ ರಕ್ಷಣೆ ಬಗ್ಗೆ ವಿಶೇಷ ಪ್ರಯತ್ನ ಮಾಡುವದು. ಈ ಕುರಿತು ಮಾಹಿತಿಯನ್ನು ರಿಕಾರ್ಡ ಪ್ರತಿಯೊಂದಿಗೆ ಟ್ರಸ್ಟಿಗೆ ಸಲ್ಲಿಸುವದು. | **ಶಾಲಾ–ಕಾಲೇಜುಗಳ ಹೆಸರಿನಲ್ಲಿರುವ ಹಾಗು ಟ್ರಸ್ಟಿನ ಹೆಸರಿನಲ್ಲಿರುವ ಭೂಮಿಯ ಕುರಿತು ದಾಖಲಾತಿಯನ್ನು ಎಲ್ಲ ಸಂಸ್ಥೆಯವರು ಪೂರೈಸಿದ್ದಾರೆ. ಅದರ ವಿವರ ವರದಿಯಲ್ಲಿ ನೀಡಲಾಗಿದೆ. ಈ ವರ್ಷ ಸ್ಥಿರ ಆಸ್ತಿಯ ಗಡಿ ರಕ್ಷಣೆಗೆ ವಿಶೇಷ ಲಕ್ಷ್ಯವಹಿಸಬೇಕು.** |
| 6. ಸಾದಿಲ್ವಾರ ಖರ್ಚಿಗೆ ನೀಡುವ ಈಗಿರುವ ವಾರ್ಷಿಕ ಮೊತ್ತವನ್ನು ರೂ.7500/– ರಿಂದ ರೂ.10,000/– ಏರಿಸುವದು. | **ಸಾದಿಲ್ವಾರ ಖರ್ಚಿಗೆ ಮಂಜೂರ ಮಾಡಿದ ಮೊತ್ತ ಆಯಾ ಶಾಲೆಗಳಿಗೆ ನೀಡಲಾಗಿದೆ. ಹಿಂದಿನ ವರ್ಷ ರೂ.1,05,000/– ನೀಡಿದ್ದರೆ ಈ ವರ್ಷದಲ್ಲಿ ರೂ.1,40,000/– ನೀಡಲಾಗಿದೆ.** |
| 7. ಪ್ರತಿಯೊಂದು ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿನಿಯರ ಉಪಯೋಗಕ್ಕಾಗಿ ಸುಸಜ್ಜಿತವಾದ ಪ್ರತ್ಯೇಕವಾದ ಶೌಚಾಲಯ ನಿರ್ಮಿಸುವದು ಹಾಗೂ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡುವದು ಕಡ್ಡಾಯ. ಯಾವ ಸಂಸ್ಥೆಗಳಲ್ಲಿ ಈ ವ್ಯವಸ್ಥೆ ಸರಿಯಾಗಿ ಇಲ್ಲವೋ ಅವರು ದಾನಿಗಳ ನೆರವಿನಿಂದ ಈ ವ್ಯವಸ್ಥೆ ಕಲ್ಪಿಸಬೇಕು. ಟ್ರಸ್ಟಿನಿಂದ Matching Share ಅವಶ್ಯವಿದ್ದಲ್ಲಿ ನೀಡಲಾಗುವದು. | **ಶಾಲಾ–ಕಾಲೇಜುಗಳ ಆವಾರದಲ್ಲಿ ಪ್ರತ್ಯೇಕವಾದ ಹಾಗೂ ಸುಸಜ್ಜಿತವಾದ ಶೌಚಾಲಯ ಇರದೇ ಇರುವ ಶಿಕ್ಷಣ ಸಂಸ್ಥೆಗಳು ನಿರ್ಮಾಣ ಮಾಡಿದ್ದಾರೆ. ಅದರ ವಿವರ ಅಭಿವೃದ್ಧಿ ಕಾರ್ಯದಲ್ಲಿ ವಿವರಿಸಲಾಗಿದೆ. ಕೆಲವು ಶಾಲೆಗಳ ಶೌಚಾಲಯದ ಕಟ್ಟಡದ ಅಂತಿಮ ಹಂತದಲ್ಲಿದೆ. ಅವಶ್ಯವಿರುವ ಶಾಲೆಗಳಿಗೆ ಟ್ರಸ್ಟಿನ ಸಹಾಯ ನೀಡಲಾಗಿದೆ. ಕೆಲವು ಸಂಸ್ಥೆಗಳಿಗೆ ದಾನಿಗಳು, ಜಿಲ್ಲಾ ಪಂಚಾಯತ ಸಹಾಯ ಧನ ನೀಡಿದೆ.** |

2013–2014ನೇ ಸಾಲಿನಲ್ಲಿ ಶಾಲಾ–ಕಾಲೇಜುಗಳ ಕಟ್ಟಡಗಳ ಮೆಂಟೆನನ್ಸ್ ಮಾಡುವ ಕುರಿತು ನಿರ್ಣಯ ಅಂಗೀಕರಿಸಲಾಗಿತ್ತು. 2014–2015ನೇ ಸಾಲಿನಲ್ಲಿ ಅದರ ಮುಂದುವರೆದ ಭಾಗವಾಗಿ ರಿಪೇರಿ ಹಾಗೂ ಮೆಂಟೆನನ್ಸ್‌ದ ಬಗ್ಗೆ ಹಾಗೂ ಇನ್ನಿತರ ಕಾರ್ಯಕ್ಕೆ ಟ್ರಸ್ಟಿನಿಂದ ಖರ್ಚು ಮಾಡಿದ ವಿವರ ಈ ಕೆಳಗಿನಂತಿದೆ.

| ಅ.ನಂ. | ಶಾಲೆಯ ಹೆಸರು | ಖರ್ಚು ಮಾಡಿದ ಮೊತ್ತ |
|---|---|---|
| 1 | **ಜನತಾ ವಿದ್ಯಾಲಯ, ಬಾಡ–ಕಾಗಾಲ** | **ರೂ.78,065** |
| 2 | **ಜನತಾ ವಿದ್ಯಾಲಯ, ಕಡತೋಕಾ** | **ರೂ.21,174** |
| 3 | **ಜನತಾ ವಿದ್ಯಾಲಯ, ಕಡವಾಡ** | **ರೂ.10,680** |
| 4 | **ಜನತಾ ವಿದ್ಯಾಲಯ, ಅನೀಲಗೋಡ** (ಕಟ್ಟಡ ನಿರ್ಮಾಣ ಮತ್ತು ರಿಪೇರಿ) | **ರೂ.1,50,000** |
| 5 | **ಗೋಖಲೆ ಸೆಂಟಿನರಿ ಕಾಲೇಜ್, ಅಂಕೋಲಾ** | **ರೂ.1,16,099** |
| 6 | **ದಿವೇಕರ ವಾಣಿಜ್ಯ ಕಾಲೇಜ್, ಕಾರವಾರ** (ಗೆಸ್ಟ್–ಹೌಸ್ ರಿಪೇರಿ) | **ರೂ.78,324** |
| 7 | **ಸ್ಟಾಫ್ ಕ್ವಾಟರ್ಸ್ ರಿಪೇರಿ** | **ರೂ.1,00,575** |
| 8 | **ಪಿ.ಎಂ.ಹೈ ಸ್ಕೂಲ್ ಕಾಂಪ್ಲೆಕ್ಸ್ ರಿಪೇರಿ** | **ರೂ.9,250** |
| 9 | **ಎಸ್.ಕೆ.ಪಿ. ಹೈ ಸ್ಕೂಲ್, ಕತಗಾಲ** | **ರೂ.65,000** |
| 10 | **ಆಫೀಸ್ ಮೆಂಟೆನನ್ಸ್** | **ರೂ.20,784** |
| 11 | **ಆಫೀಸ್ ಕಂಪ್ಯೂಟರ್, ಪ್ರಿಂಟರ್, ಇನ್ವರ್ಟರ್, ಇತ್ಯಾದಿ** | **ರೂ.1,01,695** |
| 12 | **ದಿವೇಕರ ಕಾಲೇಜ್ – ಪಿ.ಜಿ.ಕಾಮರ್ಸ್ ಸೆಂಟರ್ – ವಿಶ್ವವಿದ್ಯಾಲಯದಲ್ಲಿ ಠೇವಣಿ ಇಡುವ ಬಗ್ಗೆ** | **ರೂ.3,00,000** |
| 13 | **ಟ್ರಸ್ಟಿನ ವತಿಯಿಂದ 150 ಸೆಟ್ ಡೆಸ್ಕ್–ಬೆಂಚ್‌ಗಳನ್ನು ಮಾಡಿಸಿ ಈ ಕೆಳಗಿನ ಶಾಲೆಗಳಿಗೆ ನೀಡಲಾಗಿದೆ**<br>ಪಿ.ಎಂ.ಹೈ ಸ್ಕೂಲ್, ಅಂಕೋಲಾ – 25<br>ಜನತಾ ವಿದ್ಯಾಲಯ, ಮಿರ್ಜಾನ – 25<br>ಜನತಾ ವಿದ್ಯಾಲಯ, ಧಾರೇಶ್ವರ – 10<br>ಎಸ್.ಕೆ.ಪಿ.ಹೈ ಸ್ಕೂಲ್, ಕತಗಾಲ – 25<br>ಇಂಗ್ಲೀಷ ಮಿ. ಪ್ರೈಮರಿ ಸ್ಕೂಲ್, ಧಾರೇಶ್ವರ – 40<br>ಕನ್ನಡ ಮಿ. ಪ್ರೈಮರಿ ಸ್ಕೂಲ್, ದಾಂಡೇಲಿ – 25<br>ಒಟ್ಟು – 150 | **ರೂ.3,45,000** |
| | **ಅಂತೂ ಮೊತ್ತ** | **ರೂ.13,96,646** |

## 6. ಟ್ರಸ್ಟು / ಸಂಸ್ಥೆಗಳ ಹೆಸರಿನಲ್ಲಿರುವ ಭೂಮಿಯ ವಿವರ

ಕಳೆದ ವಾರ್ಷಿಕ ಸಭೆಯಲ್ಲಿ ಅಂಗೀಕರಿಸಿದ ಠರಾವಿನಂತೆ ಟ್ರಸ್ಟು ನಡೆಸುತ್ತಿರುವ ಎಲ್ಲ ಸಂಸ್ಥೆಗಳ ಮುಖ್ಯಸ್ಥರು ಸಂಸ್ಥೆ / ಟ್ರಸ್ಟಿನ ಹೆಸರಿನಲ್ಲಿರುವ ಭೂಮಿಯ ಇತ್ತೀಚಿನ ರಿಕಾರ್ಡ್ ಆಫ್ ರೈಟ್ಸ್ ನೀಡಿದ್ದಾರೆ. ಅವರು ನೀಡಿದ ರಿಕಾರ್ಡ್‌ನಂತೆ ಸಂಸ್ಥೆಯ ಹೆಸರಿನಲ್ಲಿರುವ ಹಾಗೂ ಲೀಜ್‌ನಲ್ಲಿರುವ ಭೂಮಿಯ ವಿವರವು ಈ ಕೆಳಗಿನಂತೆ ಇದೆ. ಸರ್ವೆ ನಂಬರ್, ಕ್ಷೇತ್ರ, ಗ್ರಾಮ, ಇತ್ಯಾದಿ, ಕುರಿತು ವಿವರವಾದ ಮಾಹಿತಿಯನ್ನು ವರದಿಯ ಕೊನೆಯಲ್ಲಿ ನೀಡಲಾಗಿದೆ.

### ABSTRACT OF LAND HOLDINGS PERTAINING TO THE TRUST INSTITUTIONS

| Sl. No. | Name of the Institution | Extent of land (Acres-Guntas-Annas) |
|---|---|---|
| 1. | **Gokhale Centenary College, Ankola** | (incl. leased land 06-31-04) **26-13-12** |
| 2. | **Divekar College Of Commerce, Karwar** | **05-00-00** |
| 3. | **P.M. Composite Junior College, Ankola** | **00-19-03** |
| 4. | **People's Multipurpose High School, Ankola** | **07-16-04** |
| 5. | **Janata Vidyalaya, Baad-Kagal, Kumta** | **03-21-00** |
| 6. | **Janata Vidyalaya, Shirali, Bhatkal** | **02-37-08** |
| 7. | **Janata Vidyalaya, Dandeli** | **15-00-00** |
| 8. | **Janata Vidyalaya, Kadwad, Karwar** | (incl. leased land 05-00-00) **07-00-08** |
| 9. | **Janata Vidyalaya, Kasarkod, Honnavar** | **04-20-00** |
| 10. | **Janata Vidyalaya, Murdeshwar, Bhatkal** | **03-14-00** |
| 11. | **Janata Vidyalaya, Mirjan-Kodkani, Kumta** | **10-00-00** |
| 12. | **Janata Vidyalaya, Kadtoka, Honnavar** | **05-17-08** |
| 13. | **Janata Vidyalaya, Mudga, Karwar** | (totally leased land) **01-34-00** |
| 14. | **Janata Vidyalaya, Dhareshwar, Kumta** | (incl. leased land 05-00-14) **09-25-14** |
| 15. | **Janata Vidyalaya, Bedkani, Siddapur** | **02-09-00** |
| 16. | **Smt. Kamalabai Pikale High School, Katgal, Kumta** | (totally leased land) **05-00-00** |
| 17. | **Janata Vidyalaya, Anilgod, Honnavar** | **05-28-00** |
| 18. | **Janata Vidyalaya, Kulve-Baroor, Sirsi** | (totally leased land) **10-00-00** |
| 19. | **Mundgod Centre** | **00-06-02** |
| 20. | **Honnekeri Hostel, Ankola** | **00-37-11** |
| 21. | **Bhavikodla Land, Kumta** | **06-21-00** |
| 22. | **Satyasai Balawadi, Kodibag, Karwar** | (totally leased land) **00-01-12** |
| | **TOTAL** (including land obtained on lease) | **133 Acres – 03 Guntas – 02 Annas** |

ಟ್ರಸ್ಟು/ ಸಂಸ್ಥೆಯ ಹೆಸರಿನಲ್ಲಿರುವ ಒಟ್ಟೂ ಭೂಮಿ **99 ಎಕರೆ 17 ಗುಂಟೆ** ಇರುತ್ತದೆ. ಮಂಜೂರಾಗದೇ ಇರುವ/ ಮಂಜೂರಿ ಹಂತದಲ್ಲಿರುವ/ ಲೀಜ್ ಮೇಲಿರುವ ಒಟ್ಟೂ ಭೂಮಿ **33 ಎಕರೆ 26 ಗುಂಟೆ 02 ಆಣೆ** ಇರುತ್ತದೆ. ಮಂಜೂರಾಗದೇ ಇರುವ ಭೂಮಿ/ ಲೀಜ್ ಮೇಲೆ ಇರುವ ಭೂಮಿಯನ್ನು ಸಂಸ್ಥೆಯ ಹೆಸರಿಗೆ ದಾಖಲಾಗುವಂತೆ ಸಂಸ್ಥೆಯ ಎಲ್ಲ ಮುಖ್ಯಸ್ಥರು ವಿಶೇಷ ಪ್ರಯತ್ನ ಮಾಡಿ ಮುಂದಿನ ವಾರ್ಷಿಕ ಸಭೆಯ ಒಳಗೆ ಟ್ರಸ್ಟಿನ/ ಸಂಸ್ಥೆಯ ಹೆಸರಿಗೆ ಆಗುವಂತೆ ಮಾಡಲು ವಿನಂತಿಸಲಾಗಿದೆ. ಈ ವಿಷಯದಲ್ಲಿ ಟ್ರಸ್ಟಿನ ಸಂಪೂರ್ಣ ಸಹಾಯ ನೀಡಲಾಗುವದು. **ಎಲ್ಲ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ವರದಿಯಲ್ಲಿ ನೀಡಿದ, ಜಾಗೆ, ಸರ್ವೆ ನಂಬರ್, ಇನ್ನೊಮ್ಮೆ ಪರಿಶೀಲಿಸಿ, ಏನಾದರೂ ವ್ಯತ್ಯಾಸ ಕಂಡುಬಂದಲ್ಲಿ ತಿಳಿಸಬೇಕು. ಯಾವದಾದರೂ ಭೂಮಿ ಯಾದಿಯಲ್ಲಿ ಸೇರ್ಪಡೆ ಯಾಗದಿದ್ದಲ್ಲಿ ಅದನ್ನು ಪರಿಶೀಲಿಸಿ ತಿಳಿಸಬೇಕು.**

## 7. ವಿದ್ಯಾರ್ಥಿಗಳ ದಾಖಲಾತಿ ಹಾಗೂ ಸಿಬ್ಬಂದಿಗಳ ವಿವರ

2014–2015ನೇ ಶೈಕ್ಷಣಿಕ ವರ್ಷದಲ್ಲಿ ಟ್ರಸ್ಟು ನಡೆಸುತ್ತಿರುವ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಹಾಗೂ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿಯವರ ವಿವರ ಈ ಕೆಳಗಿನಂತಿದೆ.

### INSTITUTIONAL STRENGTH - ACADEMIC YEAR 2014-2015


| SI | NAME OF THE INSTITUTION | Student Strength | | | Total No. of Employees | | | | |
|---|---|---|---|---|---|---|---|---|---|
| | | Boys | Girls | Total | Aided Employees | | Appointed by Mgt. | | Total |
| | | | | | Teach-ers | NT-Staff | Teach-ers | NT-Staff | |
| | **DEGREE COLLEGES** | | | | | | | | |
| 1. | Gokhale Centenary College, Ankola | 113 | 265 | **378** | 21 | 5 | 10 | 10 | **46** |
| 2. | Divekar College Of Commerce, Karwar | 108 | 202 | **310** | 9 | 5 | 3 | 8 | **25** |
| 3. | KWT's College of Education, Dandeli | 23 | 77 | **100** | - | - | 6 | 2 | **8** |
| 4. | B.C.A. College, Karwar | 30 | 60 | **90** | - | - | 6 | 2 | **8** |
| 5. | Divekar College PG Centre (M.Com.), Karwar | 5 | 16 | **21** | - | - | 2 | 2 | **4** |
| | **Total** | **279** | **620** | **899** | **30** | **10** | **27** | **24** | **91** |
| | **JUNIOR COLLEGES** | | | | | | | | |
| 6. | Gokhale Centenary P.U. College, Ankola | 182 | 113 | **295** | - | 1 | 11 | 5 | **17** |
| 7. | Divekar P.U. Commerce College, Karwar | 77 | 80 | **157** | - | - | 6 | 1 | **7** |
| 8. | J.V.Comp. Jr. College, Dandeli | 112 | 137 | **249** | 5 | 5 | 3 | 1 | **14** |
| 9. | J.V.Comp. Jr. College, Kadtoka | 56 | 47 | **103** | 5 | 1 | 2 | 2 | **10** |
| 10. | J.V.Comp. Jr. College, Shirali, Bhatkal | 237 | 208 | **445** | 6 | - | 7 | 4 | **17** |
| 11. | P.M. Comp. Jr. College, Ankola | 80 | 82 | **162** | 6 | 1 | - | 2 | **9** |
| 12. | Divekar P.U. Science College, Karwar | 18 | 15 | **33** | - | - | 4 | 2 | **6** |
| | **Total** | **762** | **682** | **1444** | **22** | **8** | **33** | **17** | **80** |
| | **HIGH SCHOOLS** | | | | | | | | |
| 13. | P.M. High School, Ankola | 273 | 217 | **490** | 15 | 2 | 4 | 2 | **23** |
| 14. | P.M. Eng. Med. High School, Ankola | 72 | 78 | **150** | - | - | 5 | 2 | **7** |
| 15. | Janata Vidyalaya, Baad-Kagal | 133 | 111 | **244** | 10 | 1 | 1 | 2 | **14** |
| 16. | Janata Vidyalaya, Shirali | 113 | 69 | **182** | 7 | 2 | 1 | - | **10** |
| 17. | Janata Vidyalaya, Dandeli | 601 | 457 | **1058** | 22 | 2 | 3 | 7 | **34** |
| 18. | Janata Vidyalaya, Kadwad | 57 | 36 | **93** | 6 | - | 1 | 2 | **9** |
| 19. | Janata Vidyalaya, Kasarkod | 88 | 93 | **181** | 5 | 1 | 1 | 1 | **8** |
| 20. | Janata Vidyalaya, Murdeshwar | 262 | 193 | **455** | 7 | 1 | 8 | 2 | **18** |
| 21. | Janata Vidyalaya, Mirjan-Kodkani | 211 | 190 | **401** | 10 | 1 | - | 1 | **12** |
| 22. | Janata Vidyalaya, Kadtoka | 122 | 103 | **225** | 9 | 1 | - | 1 | **11** |
| 23. | Janata Vidyalaya, Mudga | 72 | 56 | **128** | 7 | 1 | - | 1 | **9** |
| 24. | Janata Vidyalaya, Dhareshwar | 75 | 71 | **146** | 8 | 2 | - | - | **10** |
| 25. | Janata Vidyalaya, Bedkani | 87 | 80 | **167** | 7 | 1 | 1 | 1 | **10** |
| 26. | Smt. Kamalabai Pikale High School, Katgal | 143 | 132 | **275** | 6 | 1 | 3 | 1 | **11** |
| 27. | Janata Vidyalaya, Anilgod | 64 | 64 | **128** | 6 | 1 | 1 | 1 | **9** |
| 28. | Janata Vidyalaya, Kulve-Baroor | 49 | 53 | **102** | 6 | 2 | 1 | 1 | **10** |
| 29. | Dinkar Eng.Med.High School, Dhareshwar | 24 | 22 | **46** | - | - | 4 | - | **4** |
| | **Total** | **2446** | **2025** | **4471** | **131** | **19** | **34** | **25** | **209** |


| | | | | | | | | | |
|---|---|---|---|---|---|---|---|---|---|
| | **PRIMARY AND PRE-PRIMARY SCHOOLS** | | | | | | | | |
| 30. | English Medium Primary School, Dandeli | 644 | 505 | **1149** | 5 | - | 14 | 3 | **22** |
| 31. | Kannada Medium Primary School, Dandeli | 228 | 214 | **442** | - | - | 8 | 2 | **10** |
| 32. | Dr. Dinkar Desai Memorial Primary School, Ankola | 311 | 223 | **534** | - | - | 10 | 2 | **12** |
| 33. | Dinkar Primary School, Dhareshwar | 135 | 101 | **236** | - | - | 7 | 1 | **8** |
| 34. | Balamandir, Shirali | 98 | 76 | **174** | - | - | 8 | 4 | **12** |
| 35. | English Medium Nursery School, Dandeli | 167 | 139 | **306** | - | - | 3 | 3 | **6** |
| 36. | Kannada Medium Nursery School, Dandeli | 66 | 57 | **123** | - | - | 2 | 1 | **3** |
| 37. | Thakkar Bapa Nursery School, Ankola | 119 | 85 | **204** | - | - | 3 | 1 | **4** |
| 38. | Dinkar Pre-Primary School, Dhareshwar | 47 | 34 | **81** | - | - | 2 | 1 | **3** |
| 39. | Anandashrama Balavikasa Kendra, Mundgod | - | - | **-** | - | - | - | - | **-** |
| | **Total** | **1815** | **1434** | **3249** | **5** | **0** | **57** | **18** | **80** |
| | **OTHER SOCIAL SERVICE INSTITUTIONS** | | | | | | | | |
| 40. | Thakkar Bapa Tailoring School, Ankola | - | 15 | **15** | - | - | 2 | - | **2** |
| 41. | Tailoring School, Mundgod | - | 12 | **12** | - | - | 1 | - | **1** |
| 42. | Dinkar Kalaniketan Music School, Ankola | - | - | **-** | - | - | - | - | **-** |
| 43. | Dinkar Kalaniketan Music School, Karwar | 5 | 17 | **22** | - | - | 1 | - | **1** |
| 44. | Computer Traing Centre, Karwar | 200 | 220 | **420** | - | - | 3 | 1 | **4** |
| 45. | Computer Training Centre, Dandeli | 360 | 278 | **638** | - | - | 2 | 1 | **3** |
| | **Total** | **565** | **542** | **1107** | **0** | **0** | **9** | **2** | **11** |

## ABSTRACT OF STUDENT & EMPLOYEE STRENGTH

| SI | NAME OF THE INSTITUTION | Student Strength | | | Total No. of Employees | | | | |
|---|---|---|---|---|---|---|---|---|---|
| | | | | | Aided Employees | | Appointed by Mgt. | | |
| | | Boys | Girls | Total | Teach-ers | NT-Staff | Teach-ers | NT-Staff | Total |
| 1 | **DEGREE COLLEGES** | **279** | **620** | **899** | **30** | **10** | **27** | **24** | **91** |
| 2 | **JUNIOR COLLEGES** | **762** | **682** | **1444** | **22** | **8** | **33** | **17** | **80** |
| 3 | **HIGH SCHOOLS** | **2446** | **2025** | **4471** | **131** | **19** | **34** | **25** | **209** |
| 4 | **PRIMARY & PRE-PRIMARY SCHOOLS** | **1815** | **1434** | **3249** | **5** | **0** | **57** | **18** | **80** |
| 5 | **OTHER INSTITUTIONS** | **565** | **542** | **1107** | **0** | **0** | **9** | **2** | **11** |
| | **GRAND TOTAL** | **5867** | **5303** | **11170** | **188** | **37** | **160** | **86** | **471** |

ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಒಟ್ಟೂ 11170 ವಿದ್ಯಾರ್ಥಿಗಳು 2014–2015ನೇ ಸಾಲಿನಲ್ಲಿ ವಿವಿಧ ತರಗತಿಗಳಿಗೆ ಪ್ರವೇಶ ಪಡೆದಿರುತ್ತಾರೆ. ಎಲ್ಲ ಸಂಸ್ಥೆಗಳಲ್ಲಿ ಒಟ್ಟೂ 188 ಅನುಮೋದಿತ ಅಧ್ಯಾಪಕರು, 37 ಅಧ್ಯಾಪಕೇತರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇದರ ಹೊರತಾಗಿ ಆಡಳಿತ ಮಂಡಳಿಯಿಂದ ನೇಮಕಾತಿ ಹೊಂದಿದ ಪೂರ್ಣಕಾಲಿಕ ಹಾಗೂ ಅರೆಕಾಲಿಕ 160 ಅಧ್ಯಾಪಕರು ಹಾಗೂ 86 ಶಿಕ್ಷಕೇತರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಿಕ್ಷಣ ಸಂಸ್ಥೆಗಳಲ್ಲಿ ಒಟ್ಟೂ **471** ಸಿಬ್ಬಂದಿಗಳು ಹಾಗೂ ಟ್ರಸ್ಟ ಕಾರ್ಯಾಲಯದಲ್ಲಿ **4** ಸಿಬ್ಬಂದಿಗಳು ಸೇರಿ ಒಟ್ಟೂ **475** ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.




| | Degree Colleges | Junior Colleges | High Schools | Primary & Pre-Primary Schools | Other Institutions |
|---|---|---|---|---|---|
| Aided Teachers | 30 | 22 | 131 | 5 | 0 |
| Aided Non-Teaching Staff | 10 | 8 | 19 | 0 | 0 |
| Mgt. Appnt. Teachers | 27 | 33 | 34 | 57 | 9 |
| Mgt. Appnt. Non-Teaching | 24 | 17 | 25 | 18 | 2 |
| Total Staff | 91 | 80 | 209 | 80 | 11 |

## 8. ಶೈಕ್ಷಣಿಕ ಪ್ರಗತಿ: 2014–2015ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಹಾಗೂ ಪದವಿ ಪರೀಕ್ಷೆಯಲ್ಲಿ ಮಾಡಿದ ಸಾಧನೆ

2014–2015ನೇ ಶೈಕ್ಷಣಿಕ ವರ್ಷದಲ್ಲಿ ಜರುಗಿದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ನಮ್ಮ ಟ್ರಸ್ಟಿನ ಎಲ್ಲ ಸಂಸ್ಥೆಗಳಲ್ಲಿ ಪರೀಕ್ಷೆ ಪರಿಣಾಮದ ವಿವರ ಈ ಕೆಳಗಿನಂತೆ ಇದೆ.


### SSLC EXAMINATION HELD IN MARCH / APRIL 2015

| Name of the School | *Previous Year's Result* | Students Appeared | Students Passed | RESULT % |
|---|---|---|---|---|
| P.M. Eng. Med. High School, Ankola | *100.00* | 46 | 46 | **100.00** |
| Janata Vidyalaya, Kadtoka | *97.18* | 75 | 75 | **100.00** |
| Janata Vidyalaya Anilgod | *96.30* | 35 | 34 | **97.14** |
| Janata Vidyalaya, Kadwad | *86.21* | 33 | 32 | **96.97** |
| P.M.High School, Ankola | *95.60* | 142 | 137 | **96.48** |
| Janata Vidyalaya, Kulve-Baroor | *95.24* | 40 | 38 | **95.00** |
| Janata Vidyalaya. Kasarkod | *91.78* | 60 | 57 | **95.00** |
| Janata Vidyalaya, Murdeshwar | *76.32* | 144 | 134 | **93.06** |
| Janata Vidyalaya, Mudga | *100.00* | 52 | 47 | **90.38** |
| Janata Vidyalaya, Dhareshwar | *95.24* | 41 | 37 | **90.24** |
| Janata Vidyalaya Baad-Kagal | *95.18* | 70 | 62 | **88.57** |
| S.K.P.High School, Katgal | *87.34* | 84 | 73 | **86.90** |
| Janata Vidyalaya, Mirjan | *88.03* | 132 | 114 | **86.36** |
| Janata Vidyalaya, Shirali | *94.12* | 85 | 68 | **80.00** |
| Janata Vidyalaya, Bedkani | *95.83* | 61 | 48 | **78.69** |
| Janata Vidyalaya, Dandeli | *85.94* | 376 | 293 | **77.93** |

| | |
|---|---|
| **2015 SSLC - Karnataka State % - 81.82** | **2015 SSLC – Uttar Kannada District % - 92.87** |

2015ರ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಿ.ಎಮ್.ಆಂಗ್ಲ ಮಾದ್ಯಮ ಪ್ರೌಢಶಾಲೆ ಮತ್ತು ಜನತಾ ವಿದ್ಯಾಲಯ ಕಡತೋಕಾ ಶಾಲೆ 100ಕ್ಕೆ 100 ಫಲಿತಾಂಶ ನೀಡಿರುವದು ಹಾಗೂ ಉಳಿದ 8 ಶಾಲೆಗಳು ಶೇಕಡಾ 90ಕ್ಕಿಂತ ಹೆಚ್ಚು ಫಲಿತಾಂಶ ನೀಡಿರುವದು ಹೆಮ್ಮೆಯ ವಿಷಯ ಅವರೆಲ್ಲರೂ ಅಭಿನಂದನಾರ್ಹರು. ಅದೇ ರೀತಿ ಉಳಿದ 3 ಶಾಲೆಗಳು ಶೇಕಡಾ 85ಕ್ಕಿಂತ ಹೆಚ್ಚು ಫಲಿತಾಂಶ ನೀಡಿದೆ. ಅವರೆಲ್ಲರಿಗೂ ಅಭಿನಂದನೆಗಳು. ನಮ್ಮ ಸಂಸ್ಥೆಗಳಲ್ಲಿ ಕಡಿಮೆ ಫಲಿತಾಂಶ ನೀಡಿದ ಶಾಲೆಗಳು – ಜನತಾ ವಿದ್ಯಾಲಯ, ಶಿರಾಲಿ, ಬೇಡ್ಕಣಿ ಮತ್ತು ದಾಂಡೇಲಿ. ಈ ಶಾಲೆಗಳ ಫಲಿತಾಂಶ ರಾಜ್ಯ ಮತ್ತು ಜಿಲ್ಲೆಯ ಸರಾಸರಿಗಿಂತ ಕಡಿಮೆ ಆಗಿದೆ. ಈ ಶಾಲೆಗಳಿಗೂ ಕೂಡಾ ಅಭಿನಂದಿಸುತ್ತೇನೆ. ಆದರೆ, ಬರುವ ವರ್ಷ ಈ ಶಾಲೆಗಳ ಮುಖ್ಯಾಧ್ಯಾಪಕರು ಹಾಗೂ ಶಿಕ್ಷಕರು ಹೆಚ್ಚಿನ ಶ್ರಮ ವಹಿಸಿ ಫಲಿತಾಂಶ ಉತ್ತಮಗೊಳಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುವಂತೆ ಈ ಮೂಲಕ ವಿನಂತಿಸುತ್ತೇನೆ. ಶೇಕಡಾ 100ರಷ್ಟು ಫಲಿತಾಂಶ ನೀಡಿದ ಪಿ.ಎಂ.ಆಂಗ್ಲ ಮಾಧ್ಯಮ ಶಾಲೆ, ಅಂಕೋಲಾ ಹಾಗೂ ಜನತಾ ವಿದ್ಯಾಲಯ, ಕಡತೋಕಾ ಈ ಶಾಲೆಗಳ ವಿದ್ಯಾರ್ಥಿಗಳನ್ನು ಹಾಗೂ ಶಿಕ್ಷಕರನ್ನು ಟ್ರಸ್ಟಿನ ಪರವಾಗಿ ವಿಶೇಷವಾಗಿ ಅಭಿನಂದಿಸುತ್ತೇನೆ.

# HIGH SCHOOL RESULTS - 2014-2015




## TOP 10 SCORERS FROM THE TRUST INSTITUTIONS AT SSLC - APRIL 2015

| Sl. | Name of the Student | Name of the School | Marks | Out of | Result % |
|---|---|---|---|---|---|
| 1 | **Mr. Sachetan Ganapati Sabahit** | JV Dandeli | 614 | 625 | **98.24** |
| 2 | **Ms. Deeksha Prabhakar Bhat** | JV Kadtoka | 613 | 625 | **98.08** |
| 3 | **Mr. Subham Dashrath Koravi** | JV Dandeli | 611 | 625 | **97.76** |
| 4 | **Ms. Akshata D Hegde** | JV Kulve-Baroor | 609 | 625 | **97.44** |
| 5 | **Ms. Suha Basheer Shaikh** | PM (Eng M.) HS Ankola | 609 | 625 | **97.44** |
| 6 | **Ms. Suma G Naik** | PM (Eng M.) HS Ankola | 605 | 625 | **96.80** |
| 7 | **Ms. Spoorti S Naik** | PM (Eng M.) HS Ankola | 600 | 625 | **96.00** |
| 8 | **Mr. Yashwant S Hongekar** | JV Dandeli | 599 | 625 | **95.84** |
| 9 | **Ms. Roopa Maruti Shet** | JV Anilgod | 596 | 625 | **95.36** |
| 10 | **Ms. Muskaan Khan** | PM (Eng M.) HS Ankola | 595 | 625 | **95.20** |

ದ್ವಿತೀಯ ಪದವಿ ಪೂರ್ವ ಪರೀಕ್ಷೆಯ ಫಲಿತಾಂಶವನ್ನು ಈ ಕೆಳಗೆ ನೀಡಲಾಗಿದೆ.


## PU II YEAR EXAMINATION HELD IN APRIL 2015

| Name of the College | Stream | *Previous Year's Result* | Students Appeared | Students Passed | RESULT % |
|---|---|---|---|---|---|
| **J.V.Comp. Jr. College, Shirali** | Arts | *91.45* | 134 | 130 | **97.01** |
| **J.V.Comp. Jr. College, Dandeli** | Com | *86.44* | 66 | 59 | **89.39** |
| **J.V.Comp. Jr. College, Dandeli** | Arts | *75.00* | 47 | 42 | **89.36** |
| **J.V.Comp. Jr. College, Shirali** | Com | *97.30* | 71 | 62 | **87.32** |
| **G.C.P.U.College, Ankola** | Com | *85.00* | 38 | 32 | **84.21** |
| **G.C.P.U.College, Ankola** | Sci | *77.78* | 41 | 33 | **80.49** |
| **J.V.Comp. Jr. College, Kadtoka** | Arts | *80.30* | 44 | 30 | **68.18** |
| **P.M.Comp. Jr. College, Ankola** | Arts | *67.92* | 76 | 50 | **65.79** |
| **Divekar P.U. College, Karwar** | Com | *67.07* | 80 | 48 | **60.00** |
| **G.C.P.U.College, Ankola** | Arts | *66.67* | 13 | 7 | **53.85** |
| **Divekar P.U. College, Karwar** | Sci | *23.08* | 17 | 4 | **23.53** |

| | |
|---|---|
| **2015 PU II - Karnataka State % - 60.54** | **2015 PU II – Uttar Kannada District % - 81.19** |

ದ್ವಿತೀಯ ಪದವಿ ಪೂರ್ವ ಪರೀಕ್ಷೆಯಲ್ಲಿ ಕಲಾ ವಿಭಾಗದಲ್ಲಿ ಶೇಕಡಾ 97.01 ಫಲಿತಾಂಶ ನೀಡಿದ ಜನತಾ ವಿದ್ಯಾಲಯ ಪದವಿ ಪೂರ್ವ ಕಾಲೇಜ್, ಶಿರಾಲಿ, ವಾಣಿಜ್ಯ ವಿಭಾಗದಲ್ಲಿ ಶೇಕಡಾ 89.39 ಫಲಿತಾಂಶ ನೀಡಿದ ಜನತಾ ವಿದ್ಯಾಲಯ ಪದವಿ ಪೂರ್ವ ಕಾಲೇಜ್, ದಾಂಡೇಲಿ, ವಿಜ್ಞಾನ ವಿಭಾಗದಲ್ಲಿ ಶೇಕಡಾ 80.49 ಫಲಿತಾಂಶ ನೀಡಿದ ಗೋಖಲೆ ಸೆಂಟಿನರಿ ಕಾಲೇಜ್, ಅಂಕೋಲಾ – ಇವು ಈ ವರ್ಷ ಪ್ರಥಮ ಸ್ಥಾನದಲ್ಲಿವೆ. ಕಲಾ ವಿಭಾಗದಲ್ಲಿ ಶೇಕಡಾ 89.36 ರಷ್ಟು ಫಲಿತಾಂಶ ನೀಡಿದ ಜನತಾ ವಿದ್ಯಾಲಯ ಪದವಿ ಪೂರ್ವ ಕಾಲೇಜ್, ದಾಂಡೇಲಿ, ವಾಣಿಜ್ಯ ವಿಭಾಗದಲ್ಲಿ ಶೇಕಡಾ 87.32 ಫಲಿತಾಂಶ ನೀಡಿದ ಜನತಾ ವಿದ್ಯಾಲಯ, ಶಿರಾಲಿ ದ್ವಿತೀಯ ಸ್ಥಾನದಲ್ಲಿದೆ. ವಾಣಿಜ್ಯ ವಿಭಾಗದಲ್ಲಿ ಗೋಖಲೆ ಸೆಂಟಿನರಿ ಪದವಿ ಪೂರ್ವ ಕಾಲೇಜ್, ಅಂಕೋಲಾ ಶೇಕಡಾ 84.21 ಫಲಿತಾಂಶ ನೀಡಿ ತೃತೀಯ ಸ್ಥಾನದಲ್ಲಿದೆ. ನಂತರದ ಸ್ಥಾನದಲ್ಲಿ ಜನತಾ ವಿದ್ಯಾಲಯ ಪಪವಿ ಪೂರ್ವ ಕಾಲೇಜ್, ಕಡತೋಕಾ, ಪಿ.ಎಂ.ಪದವಿ ಪೂರ್ವ ಕಾಲೇಜ್, ಅಂಕೋಲಾ ಇವೆ. ವಾಣಿಜ್ಯ ವಿಭಾಗದಲ್ಲಿ ದಿವೇಕರ ವಾಣಿಜ್ಯ ಪದವಿ ಪೂರ್ವ ಕಾಲೇಜ್ ಹಾಗೂ ಕಲಾ ವಿಭಾಗದಲ್ಲಿ ಗೋಖಲೆ ಸೆಂಟಿನರಿ ಪದವಿ ಪೂರ್ವ ಕಾಲೇಜ್, ಅಂಕೋಲಾ, ಕೊನೆಯ ಸ್ಥಾನದಲ್ಲಿ ಇವೆ. ಉತ್ತಮ ಸಾಧನೆ ಮಾಡಿದ ಎಲ್ಲ ಕಾಲೇಜ್ ಪ್ರಾಚಾರ್ಯರು, ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು, ಅಭಿನಂದನಾರ್ಹರು. ರಾಜ್ಯ ಮತ್ತು ಜಿಲ್ಲಾ ಫಲಿತಾಂಶಕ್ಕಿಂತ ಕಡಿಮೆ ಆದ ಕಾಲೇಜುಗಳು ಈ ಬಗ್ಗೆ ಚಿಂತನೆ ಮಾಡಿ, ಕಡಿಮೆ ಫಲಿತಾಂಶ ಬರುವ ಕಾರಣ ಹುಡುಕಿ

ಇದೊಂದು ಸವಾಲಾಗಿ ಪರಿಗಣಿಸಿ ಬರುವ ವರ್ಷ ಉತ್ತಮ ಫಲಿತಾಂಶ ನೀಡುವಂತೆ ಪ್ರಯತ್ನ ಮಾಡಬೇಕು. ಅಂದರೆ ಮಾತ್ರ ಟ್ರಸ್ಟಿನ ಧ್ಯೇಯ, ಉದ್ದೇಶ ಸಫಲವಾಗುತ್ತದೆ. ಅತಿ ಕಡಿಮೆ ಫಲಿತಾಂಶ ನೀಡಿದ ಉಪನ್ಯಾಸಕರು ವಿಶೇಷವಾಗಿ ಗಮನ ಹರಿಸಿ, ಉತ್ತಮ ಫಲಿತಾಂಶ ನೀಡಲು ಕಾರ್ಯ ಯೋಜನೆ ಈಗಿನಿಂದಲೇ ಹಾಕಿಕೊಳ್ಳಬೇಕು. ಪ್ರಾಚಾರ್ಯರು ಕೂಡಾ ಈ ಬಗ್ಗೆ ಗಮನ ಹರಿಸಬೇಕು.




## TOP 10 SCORERS FROM THE TRUST INSTITUTIONS AT PU II - APRIL 2015

| Sl. | Name of the Student | Stream | Name of the School | Marks | Out of | Result % |
|---|---|---|---|---|---|---|
| 1 | **Ms. Sinchana R Nayak** | Science | GCPUCollege-Ankola | 554 | 600 | **92.33** |
| 2 | **Ms. Pragati G K** | Commerce | Divekar PU College-Karwar | 553 | 600 | **92.17** |
| 3 | **Ms. Varsha B Pai** | Commerce | Divekar PU College-Karwar | 547 | 600 | **91.17** |
| 4 | **Ms. Vinuta M Naik** | Commerce | JVCPUC-Shirali | 545 | 600 | **90.83** |
| 5 | **Ms. Aditi A Bandekar** | Commerce | Divekar PU College-Karwar | 539 | 600 | **89.83** |
| 6 | **Ms. Samrin Shaikh** | Commerce | GCPUCollege-Ankola | 530 | 600 | **88.33** |
| 7 | **Ms. Shrinidhi S Naik** | Science | GCPUCollege-Ankola | 519 | 600 | **86.50** |
| 8 | **Mr. Ramachandra Mahale** | Commerce | GCPUCollege-Ankola | 519 | 600 | **86.50** |
| 9 | **Ms. Madevi P Gonda** | Commerce | JVCPUC-Shirali | 519 | 600 | **86.50** |
| 10 | **Ms. Makarand Gurav** | Science | GCPUCollege-Ankola | 511 | 600 | **85.17** |

### ಇದುವರೆಗೆ ಲಭ್ಯವಿದ್ದ ಪದವಿ ಪರೀಕ್ಷೆಯ ಫಲಿತಾಂಶವನ್ನು ಈ ಕೆಳಗೆ ನೀಡಲಾಗಿದೆ

**DEGREE EXAMINATION HELD IN MAY / JUNE 2015**

| Name of the College | Stream | *Previous Year's Result* | Students appeared | Students passed | RESULT % (2014-2015) |
|---|---|---|---|---|---|
| **KWT's BCA College, Karwar** | B.C.A. | *100* | **35** | **35** | **100** |
| **KWT's B.Ed. College, Dandeli** | B.Ed. | *97.47* | **98** | **98** | **100** |

ಕಾರವಾರದ ಬಿ.ಸಿ.ಎ. ಕಾಲೇಜ್ ಹಾಗೂ ದಾಂಡೇಲಿಯ ಬಿ.ಎಡ್. ಕಾಲೇಜ್ ಶೇಕಡಾ 100 ಫಲಿತಾಂಶ ನೀಡಿರುವದು ಹೆಮ್ಮೆಯ ವಿಷಯ. ಸಂಸ್ಥೆಗಳ ಮುಖ್ಯಸ್ಥರಿಗೆ, ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಟ್ರಸ್ಟಿನ ಪರವಾಗಿ ಅಭಿನಂದಿಸುತ್ತೇನೆ.

## 9. 2014–2015ನೇ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ವಿಶೇಷ ಸಾಧನೆ

| | |
|---|---|
| **1.** | **ಗೋಖಲೆ ಸೆಂಟಿನರಿ ಪದವಿ ಕಾಲೇಜ್, ಅಂಕೋಲಾ**<br>• ವಿಶಾಲ ಮೊಹನ ನಾಯಕ, ಬಿ.ಎ.II – ವಾಲಿಬಾಲ್ – ಯುನಿವರ್ಸಿಟಿ ಬ್ಲ್ಯೂ<br>• ಪ್ರದೀಪ ಜಯರಾಮ ನಾಯ್ಕ, ಬಿ.ಎ.II – ಕಬಡ್ಡಿ – ಯುನಿವರ್ಸಿಟಿ ಬ್ಲ್ಯೂ |
| **2.** | **ದಿವೇಕರ ವಾಣಿಜ್ಯ ಪದವಿ ಕಾಲೇಜ್, ಕಾರವಾರ**<br>• ರೀನಾ ಅನ್ವೇಕರ, ಬಿ.ಕಾಂ. ದಲ್ಲಿ ವಿಶ್ವವಿದ್ಯಾಲಯಕ್ಕೆ 5ನೇ ರ‍್ಯಾಂಕ<br>• ಅಕ್ಷತಾ ಪಾವ್ಸಕರ, ಬಿ.ಕಾಂ. ದಲ್ಲಿ ವಿಶ್ವವಿದ್ಯಾಲಯಕ್ಕೆ 10ನೇ ರ‍್ಯಾಂಕ |
| **3.** | **ಗೋಖಲೆ ಸೆಂಟಿನರಿ ಪದವಿ ಪೂರ್ವ ಕಾಲೇಜ್, ಅಂಕೋಲಾ**<br>• ಸೂರ್ಯ ಗೌಡಾ, ವಿಘ್ನೇಶ ನಾಯಕ, ಸುಬ್ರಮಣ್ಯ ಗೌಡಾ, ಇವರು ಚಿತ್ರದುರ್ಗದಲ್ಲಿ ಜರುಗಿದ ರಾಜ್ಯಮಟ್ಟದ ಪಿ.ಯು ಕಾಲೇಜು ಕ್ರೀಡಾಕೂಟದಲ್ಲಿ ಭಾಗವಹಿಸಿರುವರು |
